ಪ್ರಪಂಚದ ಅತ್ಯಂತ ದೊಡ್ಡ ಸಜೀವ ವಸ್ತು

ಕ್ಯಾರೋಲಿನ್ ಅರ್ನಾಲ್ಡ್




ಪ್ರಪಂಚದ ಅತ್ಯಂತ ದೊಡ್ಡ ಸಜೀವ ವಸ್ತು

ಕ್ಯಾರೋಲಿನ್ ಅರ್ನಾಲ್ಡ್





ವಿಶಾಲ ಸೆಕೋಯಾ ಮರ



Giant Sequoia Trees
LAKE TAHOE
NEVADA
ನೆವಡಾ
SIERRA
NEVADA
MOUNTAINS
Sacramento
San Francisco
YOSEMITE
NATIONAL
PARK
KINGS
CANYON
NATIONAL
PARK
SEQUOIA
NATIONAL
PARK
Fresno
CALIFORNIA
ಕ್ಯಾಲಿಫೋರ್ನಿಯಾ
PACIFIC
OCEAN
ಪ್ರಶಾಂತ ಮಹಾಸಾಗರ



ಪ್ರಶ್ನೆ: ಯಾವ ಮರ "ಸ್ಟ್ಯಾಚು ಆಫ್ ಲಿಬರ್ಟಿ"
ಕಿಂತಲು ಎತ್ತರವಾಗಿದೆ ?

ಒಂದು ದೊಡ್ಡ ಹಡಗುಗಿಂತಲು ಬರಿ ?

ಎಲ್ಲಾ ಸಜೀವ ವಸ್ತುಗಳಿಂತಲು ದೊಡ್ಡದು?



ಉತ್ತರ: ಒಂದು ವಿಶಾಲ [ದೈತ್ಯ] ಸೆಕೋಯಾ ಮರ.

ವಿಶಾಲ [ದೈತ್ಯ] ಸೆಕೋಯಾ ಮರಗಳು ಕ್ಯಾಲಿಫೋರ್ನಿಯಾದ ಸಿಯೆರಾ ನೆವಡಾ ಪರ್ವತ ಪ್ರದೇಶದಲ್ಲಿ ಬೆಳಯುತ್ತವೆ.


ಬಹುತೇಕ ವಿಶಾಲ ಸೆಕೋಯಾ ಮರಗಳನ್ನು ಸೆಕೋಯಾ, ಕಿಂಗ್ಸ್ ಕ್ಯಾನ್ಯನ್ ಮತ್ತು ಯೋಸೆಮಿಟ್ ರಾಷ್ಟೀಯ ವನಗಳಲ್ಲಿ ಕಾಣಬಹುದು.

ಎಲ್ಲಾ ಮರಗಳಿಕ್ಕಿಂತ ದೊಡ್ಡ, ವಿಶಾಲ ಸೆಕೋಯಾ ಮರ ರಾಷ್ಟ್ರಿಯ ಉದ್ಯಾನವನದಲ್ಲಿ ಇದೆ.


ಅದನ್ನು "ಜನರಲ್ ಶೆರ್ಮನ್ ಟ್ರೀ" ಎಂದು ಕರೆಯುತ್ತಾರೆ .

ಅದು ೨೭೨ ಅಡಿ ಎತ್ತರ ಮತ್ತು ಸುಮಾರು ೬೦೦೦ಟನ್ ಬರಿ ಇದೆ.






ಡಗ್ಲಸ್ ದೇವ್ದಾರ, ಯೂಕಲಿಪ್ಟಸ್ ಮಾತು ರೆಡ್ವುಡ್ ಮರಗಳು ೩೦೦ಅಡಿ ಎತ್ತರವಿರುತ್ತದೆ, ಅವು ವಿಶಾಲ [ದೈತ್ಯ] ಸೆಕೋಯಾ ಮರಕ್ಕಿಂತ ಎತ್ತರ.



ಆದರೆ ಬಹುಪಾಲು ಮರಗಳು ಅಷ್ಟು ಎತ್ತರ ವಿರುವುದಿಲ್ಲಾ, ಓಕ್ ಮಾತು ಮೇಪಲ್ ಮರಗಳು ೧೦೦ಅಡಿ ಗಿಂತ ಕಮಿ ಎತ್ತರ ವಿರುತ್ತವೆ.

ಮತ್ತೊಂದು ವಿಷಯ, ಪ್ರಪಂಚದಲ್ಲಿ ಎಲ್ಲಾ ಮರಕ್ಕಿಂತ ಭಾರ ವಿಶಾಲ ಸೆಕೋಯಾ.







ವಿಶಾಲ ಸೆಕೋೀಯಾಮರದ ಕಾಂಡ ಅತಿ ದಟ್ಟವಾದದ್ದು.

ಕೆಲವೊಮ್ಮೆ ವಿಶಾಲ್ ಸೆಕೋೀಯಾ ಮರ ಬಿದುಹೋೀಗುತ್ತದೆ, ಆಗ ಜನರು ಆ ಮರದ ಸ್ವಲ್ಪ ಬಾಘವನ್ನು ತೂಕಮಾಡಿ, ಪೂರ್ತಿ ವಿಶಾಲ್ ಸೆಕೋೀಯಾ ಮರದ ತೂಕವನ್ನು ಕಂಡುಹಿಡಿಯುತ್ತಾರೆ.



ಬಹಳ ಕಾಲದವರೆಗೆ ವಿಶಾಲ ಸೆಕೋಯಾ ಮರಗಳ ಬಗ್ಗೆ ಯಾರಿಗೂ ತಿಳಿದಿರಲಿಲ್ಲ. ೧೮೪೮ ರಲ್ಲಿ ಕ್ಯಾಲಿಫೋರ್ನಿಯಾನಲ್ಲಿ ಚಿನ್ನ ಪತ್ತೆಯಾಯಿತು.

ಎಲ್ಲಕಡೆಯಿಂದ ಜನರು ಚಿನ್ನವನ್ನು ಹುಡುಕುತ್ತಾ ಕ್ಯಾಲಿಫೋರ್ನಿಯಾಗೆ ಬಂದರು.

ಕೆಲವರು ನಡೆದುಕೊಂಡು, ಕೆಲವರು ಕುದುರೆಯಮೇಲೆ ಮತ್ತೆ ಕೆಲವರು ಕುದುರೆಗಾಡಿಗಳಲ್ಲಿ ಅಲ್ಲಿಗೆ ಬಂದರು. ಅವರು ಚಿನ್ನದ ಗಣಿಗಾರರಾಗಿಬಿಟ್ಟರು.





ಈ ಜನರು ಸಿಯೆರಾ, ನೆವಡಾ ಬೆಟ್ಟದ ಶಿಬಿರದಲ್ಲಿದ್ದರು.

ಮುರ್ಫಿ ಎಂಬ ಒಂದು ಶಿಬಿರದಲ್ಲಿ, ೧೮೫೨ರಲ್ಲಿ ಆಗುಸ್ಟ್ಸ್ ಟಿ. ದಾವೂದ್ ಎಂಬ ವ್ಯಕ್ತಿ ಕೆಲಸಮಾಡುತ್ತಿದ್ದ, ಅವನು ಒಬ್ಬ ಬೇಟೆಗಾರನಾಗಿದ್ದ.


ಪ್ರತಿದಿನ ತನ್ನ ಆಹಾರವನ್ನು ಹುಡುಕಲು ಅವನು ಕಾಡಿಗೆ ಹೋಗೋತಿದ್ದ.


ಒಂದು ದಿನ ಅವನು ಒಂದು ಅದ್ಭುತ ಆವಿಷ್ಕಾರವನ್ನು ಮಾಡಿದನು. ಅವನು ಒಂದು ವಿಶಾಲ [ದೈತ್ಯ] ಸೆಕೋಯಾ ಮರವನ್ನು ಕಂಡನು.

ಆ ಮರ ಎಷ್ಟು ಎತ್ತರವಿತೆಂದೆರೆ ಅದು ಆಕಾಶವನ್ನು ಮುಟ್ಟಿದಂತಿತ್ತು.

ಅಷ್ಟು ದೊಡ್ಡ ಮರವನ್ನು ಅವನು ಮುಂಚೆ ಯಾವತ್ತೂ ನೋಡಿರಲಿಲ್ಲ.

ಅವನಿಗೆ ಆ ಸಮಯದಲ್ಲಿ ಅರಿವಿರಲಿಲ್ಲ, ಅವನು ಕಂಡದ್ದು, ಪ್ರಪಂಚದ ಅತ್ಯಂತ ದೊಡ್ಡ ಮರವಾಗಿತ್ತು.







ದಾವುದ್ ತನ್ನ ಶಿಬಿರಕ್ಕೆ ಧಾವಿಸಿ ಹಿಂತಿರುಗಿದನು. ಅವನು ಆ ವಿಶಾಲ, ದೊಡ್ಡ ಮರದ ಬಗ್ಗೆ ಎಲ್ಲರಿಗು ಹೇಳಿದನು.

ಅವರು ನಾಗಲಾರಂಭಿಸಿದರು, ಕೇಳಿದರು, "ನಮನ್ನು ಮೂರ್ಖರನ್ನಗಿ ಮಾಡುತ್ತಿದೀಯಾ?" ಎಂದು

"ಅಷ್ಟು ದೊಡ್ಡ ಮರ ಇರುವುದಕ್ಕೆ ಸಾಧ್ಯವೇಯಿಲ್ಲ".

ಅವನ ಮಾತನ್ನು ಯಾರು ನಂಬಲಿಲ್ಲ. ಆ ವಿಶಾಲ, ದೊಡ್ಡ ಮರವನ್ನು ನೋಡಲು ಕಾಡಿಗೆ ಹೋಗಲು ಒಬ್ಬರು ಸಿದ್ಧವಾಗಲಿಲ್ಲ.

ಆದರಿಂದ ಅವನು ಗಣಿಗಾರರನ್ನು ಮೋಸಗೊಳಿಸಲು ನಿರ್ಧರಿಸಿದನು.

ಅವನು ಕೆಲವು ದಿನಗಳು ನಿರೀಕ್ಷಿಸಿದ, ನಂತರ ಒಂದು ದಿನ ಕಾಡಿನಿಂದ ಓಡಿ-ಓಡಿ ಮರಳಿಬಂದ. ಈ ಸಲಾ ಅವನು ಅವರೆಲ್ಲರಿಗೂ ಹೇಳಿದ, "ನಾನು ಒಂದು ದೊಡ್ಡ ಗ್ರೀಸಲಿ ಕರಡಿಯನ್ನು ಕೊಂದಿದ್ದೇನೆ, ಅದನ್ನು ಇಲ್ಲಿಗೆ ತರಲು ಸಹಾಯ ಮಾಡಿ, ನನ್ನ ಜೊತೆಗೆ ಬೇಗ ಬನ್ನಿ !"

ಆ ದೊಡ್ಡ ಗ್ರೀಸಲಿ ಕರಡಿಯನ್ನು ನೋಡಲು ಎಲ್ಲರು ಅವನ ಹಿಂದೆ-ಹಿಂದೆ ಓಡಿದರು. ದಾವುದ್ ಆ ಗಣಿಗಾರರನ್ನು ಕಾಡಿನ ಒಳಗಡೆ ಕರೆದೊಯ್ದನು.

"ಕರಡಿ ಎಲ್ಲಿ?" ಅವರು ಕೇಳಿದರು .

"ಶೀಘ್ರವೇ ಕಾಣಿಸುತ್ತೆ" ದಾವುದ್ ಹೇಳಿದ. ಅಷ್ಟರಲ್ಲಿ, ಅವರು ವಿಶಾಲ, ದೊಡ್ಡ ಧೈತ್ಯ ಸೆಕೋಯಾ ಮರವನ್ನು ಕಂಡರು, ಎಲ್ಲರು ಸ್ತಬ್ಧರಗಿ ನಿಂತಲ್ಲೇ ನಿಂತರು.

"ನೋಡಿ", ಅಗಸ್ಸಾಸ್ ದಾವುದ್ ಹೇಳಿದ.

"ಇಲ್ಲಿ ಯಾವುದೇ ಕರಡಿ ಇಲ್ಲ , ಆದರೆ ಸತ್ಯವಾಗಲು ಒಂದು ದೈತ್ಯ ದೊಡ್ಡ ಮರವಿದೆ"!.









ಈ ವಿಶಾಲ ಮರಕ್ಕೆ ಪ್ರಸಿದ್ಧ ಚೆರೋಕೀ ಇಂಡಿಯನಿನ ಗೌರವಾರ್ಥವಾಗಿ ಸೆಕೋಯಾ ಎಂದು ಹೇಸಿರಾಡಲಾಗಿದೆ, ಅಕ್ಷರದಲ್ಲಿ ಸ್ವಲ್ಪ ಬದಲಾವಣೆ ಆಗಿದೆ.

Sequoya ಹೆಸರಿನ ವ್ಯಕ್ತಿ ಚೆರೋಕೀ ಅಕ್ಷರದ ಆವಿಷ್ಕಾರಕ್ಕೆ ಪ್ರಸಿದ್ಧನಾಗಿದ್ದ , ಅವನ ಹೇಸರನ್ನು sequoia ಮಾಡಿ ಈ ಮರಗಳಿಗೆ ಇಡಲಾಗಿದೆ.

ಈತ ಸೆಕೋಯಾ ಮರಗಳನ್ನು ಎಂದಿಗೂ ಕಣ್ಣಲಿಲ್ಲ, ಆದರೆ ಸಿಯೆರಾ ಪ್ರದೇಶದ ದೊಡ್ಡ, ವಿಶಾಲ, ದೈತ್ಯ ಮರಗಳ ಹೆಸರು ಅವರ ಗ್ಯಾರಾವರ್ತವಾಗಿ ‘ಸೆಕೋಯಾ’ ಎಂದು ಅಮರವಾಗಿದೆ.





ಶೀಘ್ರವೇ ವಿಶಾಲ ದೊಡ್ಡ, ದೈತ್ಯ ಮರವನ್ನು ನೋಡಲು ಅನೇಖ ಜನರು ಬರಲಾರಂಭಿಸಿದರು.

ಒಬ್ಬ ಪತ್ರಕರ್ತ ಈ ಮರಗಳ ಬಗ್ಗೆ ಒಂದು ಲೇಖನವನ್ನು ಬರೆದ.

ಕೆಲವೇ ಸಮಯದಲ್ಲಿ ಇಡೀ ಪ್ರಪಂಚಕ್ಕೆ ದೈತ್ಯ ಸೆಕೋಯಾ ಮರದ ಬಗ್ಗೆ ಗೊತ್ತಾಯಿತು.

ಮರ ಕಡಿಯುವವರು ಈ ಮರಗಳನ್ನು ಕಡಿಯಲು ಬಂದರು, ಪ್ರವಾಸಿಗಳು ಈ ಮರಗಳನ್ನು ನೋಡಲು ಬಂದರು, ವಿಜ್ಞಾನಿಗಳು ಮರಗಳ ಅಧ್ಯಯನ ಮಾಡಲು ಬಂದರು, ಪ್ರತಿಯೊಬ್ಬರು ವಿಶಾಲ ಸೆಕೋಯಾ ಮರದ ಬಗ್ಗೆ ಮಾಹಿತಿ ಪಡೆಯಲು ಬಯಸಿ ಅಲ್ಲಿಗೆ ಬಂದರು.

ಅವುಗಾಳ ವಯಸು ಎಷ್ಟಿರಬಹುದು?

ಈ ಮರಗಳು ಇಷ್ಟು ದೊಡ್ಡದಾಗಿ ಹೇಗೆ ಬೆಳೆದವು?






ವಿಶಾಲ ಸಿಕ್ವಿಯ ಮರದ ಮೋಟುವು [ಬುಡವು] ಸಹಾ ಬಹುದೊಡ್ಡದಾಗಿತ್ತು. ಒಂದು ಮೋಟು ಎಷ್ಟು ದೊಡ್ಡದಿತೆಂದರೆ, ೩೨ ಜನ ಒಟ್ಟಿಗೆ ಇದರ ಮೇಲೆ ನೃತ್ಯ ಮಾಡಬಹುದಿತ್ತು, ಇದನ್ನು ನೃತ್ಯ ಮಹಡಿಯಾಗಿ ಬಳಸಬಹುದಾಗಿತ್ತು.




ಪ್ರತಿ ಮೋಟುವಿನ [ಕಾಂಡದ] ಮೇಲೆ ಉಂಗುರಗಳಿತ್ತು. ಒಂದು ವರ್ಷಕ್ಕೆ ಎರಡು ಉಂಗರಗಳು ಕಂಡುಬರುತ್ತವೆ. ವಸಂತಕಾಲದಲ್ಲಿ ತಿಳಿ ಬಣ್ಣದ ಉಂಗುರಗಳು ಮತ್ತು ಬೇಸಿಗೆಯಲ್ಲಿ ಗಾಢ ಬಣ್ಣದ ಉಂಗುರಗಳು ರೂಪಗೊಳ್ಳುತ್ತವೆ.

ಹವಾಮಾನವು ಉತ್ತಮವಾಗಿದ್ದ ವರ್ಷಗಳಲ್ಲಿ ಉಂಗುರಗಳು ದಪ್ಪವಾಗಿರುತ್ತವೆ, ಹವಾಮಾನವು ವ್ಯತಿರಕ್ತವಾಗಿದ [ಕೆಟ್ಟದಾಗಿದ] ವರ್ಷಗಳಲ್ಲಿ ಉಂಗುರಗಳು ತೆಳ್ಳಗಿರುತ್ತವೆ.

ಮರ ಕಡಿಯುವವರು, ಪ್ರತಿ ಕಾಂಡದ ಮೇಲಿರುವ ಉಂಗುರಗಳನ್ನು ಎಣಿಸಿದರು. ಆ ಮರದ ಉಂಗುರಗಳನ್ನು ಎಣಿಸುವ ಮೂಲಕ ಆ ಮರ ಎಷ್ಟು ಹಳೆಯದು ಎಂದು ಅವರಿಗೆ ತಿಳಿಯಿತು. ಒಂದು ಮರದ ಮೋಟುವಿನ [ಕಾಂಡದ] ಮೇಲೆ ೨೧೦೦ ಉಂಗುರಗಳ ಜೋಡಿಗಳು ಇದ್ದವು.



ಆ ಸೆಕೋಯಾ ಮರ ೨,೧೦೦ ವರ್ಷ ವಯಸ್ಸಿನದಾಗಿತ್ತು!!





ಪ್ರತಿ ದೊಡ್ಡ ಸೆಕೋೀಯಾ ಮರವು ಒಂದು ಚಿಕ್ಕ ಬೀಜದಿಂದ ಬೆಳೆಯುತ್ತದೆ.

ಈ ಬೀಜ ಒಂದು ಪಯ್ನ್ ಕೋನ್ [pine cone] ನಿನ ಒಳಗಡೆ ಬೆಳಯುತ್ತದೆ.

ಹಣ್ಣು ಮಾಗಿದಾಗ ಬೀಜ ನೆಲಕ್ಕೆ ಉದುರುತ್ತದೆ,
ಮಳೆ ಅದನ್ನು ತೇವಗೊಳಿಸುತ್ತದೆ,

ಸೂರ್ಯನು ಅದನ್ನು ಬೆಚ್ಚಗಾಗಿಸುತ್ತಾನೆ,

ನಂತರ ಅದು ಮೊಳಕೆಯೊಡದು ಬೆಳೆಯುತ್ತದೆ.

ಮೊದಲು ಇದು ಚಿಕ್ಕ ಗಿಡವಾಗಿರುತ್ತದೆ,

ಪ್ರತಿ ವರ್ಷ ಇದು ದೊಡ್ಡದಾಗುತ್ತದೆ . ಹವಾಮಾನ ಸೂಕ್ತವಾಗಿದ್ದು ಮತ್ತು ಅದರ ಸುತ್ತಾ ಜಾಗವಿದ್ದರೆ ಈ ಸೆಕೋೀಯಾಗಿಡ

ಒಂದು ವರ್ಷದಲ್ಲಿ ಬಹಳಷ್ಟು ಇಂಚುಗಳು ಬೆಳಯುತ್ತದೆ.



ಎರಡು ವಾರಗಳ ಮೊಳಕೆ


ಮೊದಲಿಗೆ ಅದು ಇತರ ಪಯ್ನ [ಸರ್ವೇ] ಮರಗಳಂತೆ ಕಾಣುತ್ತದೆ.

ಸೆಕೋವಾ ಮರ ೭೫ವರ್ಷ ವಯಸಿನಲ್ಲಿ ಸುಮಾರು ೧೦೦ಅಡಿ ಎತ್ತರ ಬೆಳೆದುಬಿಟ್ಟಿರುತ್ತದೆ, ಆಗ ಕಾಂಡದ ಕೆಳಭಾಗ ಬರಿದಾಗುತ್ತದೆ, ಕಾಂಡದಿಂದ ಎಲೆಗಳು ಉದುರುತ್ತವೆ. ಮರದ ಕೊಂಬೆಗಳು ಮೇಲ್ಬಾಗದಲ್ಲಿ ತೋಳುಗಳಂತೆ ಚಾಚಿಕೊಂಡಿರುತ್ತವೆ. ಮರದ ತೊಗಟೆ ಗಾಢ ಕೆಂಪು ಬಣ್ಣಕೆ ತಿರುಗುತ್ತದೆ.

ಇದು ವಿಶಾಲ ದೈತ್ಯ ಸೆಕೋಯಾ ತರಹ ಕಾಣಲಾರಂಬಿಸುತ್ತದೆ.



5 ವರ್ಷ | 25 ವರ್ಷ | 75 ವರ್ಷ



1000 ವರ್ಷ | 2000 ವರ್ಷ | 3000 ವರ್ಷ

ವಿಶಾಲ ಸೆಕೋಯಾ ಮರ ಇತರ
ಮರಗಳಂತೆ ಬೆಳಯುತ್ತದೆ.

ಈ ಮರಗಳಿಗು ಸೂರ್ಯನ ಶಾಖ, ಮಳೆ
ಮತ್ತು ಮಣ್ಣಿನ ಅವಶ್ಯಕತೆಯುಂಟು.

ಆದರೆ ಇವಕ್ಕೆ ಇನ್ನೊಂದರ ಅವಶ್ಯಕತೆ ಇದೆ,
ಅದೇನಂದರೆ - ಬೆಂಕಿ.

ಕಾಡ್ಗಿಚ್ಚು ಭಯಾನಕ, ಆದರೆ ಕೆಲವೊಮ್ಮೆ
ಸಣ್ಣ-ಪುಟ್ಟ ಬೆಂಕಿ ಉಪಯೋಗಕಾರಿ.
ಸಾಮಾನ್ಯವಾಗಿ ಬೆಂಕಿಯಿಂದ ದೊಡ್ಡ
ಸೆಕೋಯಾ ಮರಗಳಿಗೆ ಆಘಾತವಿಲ್ಲ.

ಅವರ ದಪ್ಪ ತೊಗಟೆ ಬೆಂಕಿಯಿಂದ
ಸುಡುವುದಿಲ್ಲ. ಈ ತೊಗಟೆ ಮರವನ್ನು
ರಕ್ಷಿಸುತ್ತದೆ. ಬೆಂಕಿಯು ಗಾಯದ





ಗುರುತುಗಳನ್ನು ಬಿಡಬಹುದು, ಆದರೆ ಮರವು
ಕುಸಿದುಬೀಳುವುದಿಲ್ಲ.

ಬೆಂಕಿ ಅನೇಕ ರೀತಿಯಲ್ಲಿ ವಿಶಾಲ ಸೆಕೋಯಾ ಮರದ ಸಹಾಯ ಮಾಡುತ್ತದೆ.

ಬೆಂಕಿ ಸೆಕೋಯಾ ಮರದ ಬೀಜಕ್ಕಾಗಿ ನೆಲವನ್ನು ತಯಾರು ಮಾಡುತ್ತದೆ.

ಬೀಜ ಮೊಳಕೆ ಉರಲು ಖಾಲಿ ನೆಲದಮೇಲೆ ಬೀಳಬೇಕು, ಎಷ್ಟೊಸಲಿ ನೆಲ್ಲಾ ಕೊಂಬೆ ಮತ್ತು ಎಲೆಗಳಿಂದ ತುಂಬಿರುತ್ತದೆ, ಬೀಜಗಳು ಮಣ್ಣನ್ನು ಸೇರುವ ಮುಂಚೆಯೇ ಇದರಲ್ಲಿ ಕಳೆದು ಹೋಗುತ್ತವೆ.

ಬೆಂಕಿ ಈ ಕಸವನ್ನು ಸುಟ್ಟುಹಾಕುವದರಿಂದ ಬೀಜ ನೆಲದಲ್ಲಿ ಉರಿ ಮೊಳಕೆ ಉರಲು ಸಾದ್ಯವಾಗುತ್ತದೆ.



ಬೆಂಕಿ ಕೋನ್ [ಶಂಖು]ಯಿಂದ ಬೀಜವನ್ನು ಹೊರಬರಲು ಸಹಾಯ ಮಾಡುತ್ತದೆ. ಸಾಮಾನ್ಯವಾಗಿ ಬೀಜಗಳನ್ನುಕೋನ್ ಗಳು [ಶಂಕುಗಳು] ಒಳಗಡೆ ಬಿಗಿಯಾಗಿ ಹಿಡಿದಿರುತ್ತವೆ.

ಕಾಡ್ಗಿಚ್ಚು ಗಾಳಿಯನ್ನು ಬಿಸಿ ಮಾಡುತ್ತದೆ. ಈ ಗಾಳಿ ಕೋನ್[ಶಂಖು]ಅನ್ನು ವಣ್ಣಗಿಸುತ್ತದೆ, ಇದರಿಂದ ಕೋನ್ ಗಳು ತೆರೆದುಕೊಳ್ಳುತ್ತವೆ.

ಬೀಜಗಳು ಬೆಂಕಿಯಿಂದ ತಯಾರಾದ ನೆಲದಮೇಲೆ ಬಿಳುತ್ತವೆ.

ಡಗ್ಲಸ ಅಳಿಲುಗಳು ಕೂಡಾ ಬೀಜಗಳನ್ನು ನೆಡುತ್ತವೆ, ಅಳಿಲುಗಳಿಗೆ ದೈತ್ಯ ಸೆಕೋಯಾ ಮರದ ಕೋನ್ ನ್ನು ತಿನಲ್ಲು ಇಷ್ಟ, ಆದರೆ ಅವು ಕೆಲವೊಮ್ಮೆ ತಿನ್ನುವ ಗಡಿಬಿಡಿಯಲ್ಲಿ ಬೀಜವನ್ನು ಭೂಮಿಯ ಮೇಲೆ ಬಿಳಿಸುತ್ತವೆ.





ಬೆಂಕಿಯು ಮಣ್ಣಿನಲ್ಲಿ ಖನಿಜಗಳ ಮಾತ್ರವನ್ನು ಹೆಚ್ಚಲು ಸಹಾಯ ಮಾಡುತ್ತದೆ.

ಗಿಡಗಳು ಬೆಳೆಯುವುದಕ್ಕೆ ಖನಿಜಗಳು ಬೇಕು, ಈ ಖನಿಜಗಳು ಬೂದಿಯಿಂದ ಸಿಗುತ್ತದೆ.

ಮಳೆ ಈ ಖನಿಜಗಳು ಮಣ್ಣಿನಲಿ ಹೀರಿಕೊಳ್ಳುವಂತೆ ಮಾಡುತ್ತದೆ.



ಬೆಂಕಿಯು ಸೆಕೋಯಾ ತೋಪುಗಳನ್ನು ಸಹ ನಾಶಪಡಿಸುತ್ತದೆ.

ಬೆಂಕಿ ಬೇರೆ-ಬೇರೆ ತರಹದ ಮರಗಳನ್ನು ನಾಶಮಾಡುತ್ತದೆ.

ಬೆಂಕಿ ಚಿಕ್ಕ-ಚಿಕ್ಕ, ವಯಸ್ಸಾದ ಮತ್ತು ಅನಾರೋಗ್ಯ ಮರಗಳನ್ನು ಸುಟ್ಟುಹಾಕುತ್ತದೆ.

ಇದರಿಂದ ದೊಡ್ಡ ಸೆಕೋಯಾ ಮರಗಳು ಇನ್ನು ದೊಡ್ಡದಾಗಿ, ಎತ್ತರವಾಗಿ ಬೆಳಯುತ್ತವೆ.

ಒಮ್ಮೆ, ಒಂದು ಸೆಕೋಯಾ ಮರದ ಕಾಂಡದ ಮೂಲಕ ಒಂದು ಸುರಂಗವನ್ನು ಕತ್ತರಿಸಲಾಗಿತ್ತು.

ಅದು ಎಷ್ಟು ದೊಡ್ಡದಾಗಿತೆಂದರೆ, ಒಂದು ಕಾರನ್ನು [ಗಾಡಿ] ಅದರೊಳಗೆ ಚಲಾಯಿಸಬಹುದಿತ್ತು.


೧೯೬೯ರ ಚಳಿಗಾಲದಲ್ಲಿ ಆ ಸುರಂಗ ಮರ ಬಿದುಹೋಯಿತು.

ಸಾಮಾನ್ಯವಾಗಿ ದೈತ್ಯ, ವಿಶಾಲ, ದೊಡ್ಡ ಸೆಕೋಯಾ ಮರಗಳು ಅನಾರೋಗಕ್ಕೆ ಒಳಗಾಗುವುದಿಲ್ಲ ಮತ್ತು ಅವು ಸಾಯುವುದಿಲ್ಲ.

ಸೆಕೋಯಾ ಮರಗಳ ಅಂತ್ಯ, ಹೆಚ್ಚಾಗಿ ದೊಡ್ಡ ಬಿರುಗಾಳಿ ಬಂದು ಮರ ಉರುಳಿ ಬೀಳುವುದರಿಂದಾಗುತ್ತದೆ.


ಕೆಲವೊಮ್ಮೆ ಅವುಗಳ ಬೇರುಗಳು ಆ ದೊಡ್ಡ ಮರವನ್ನು ಎತ್ತಿ ಹಿಡಿಯುವಷ್ಟು ಬಲವಾಗಿರುವುದಿಲ್ಲ.





ಹೆಲ್ ಥಾರ್ಪ್ ಎಂಬ ಒಬ್ಬ ವ್ಯಕ್ತಿ
ಒಮ್ಮೆ ಬಿದ್ದ ಮರದ ಟೊಳ್ಳಾದ
ಕಾಂಡದಲ್ಲಿ ತನ್ನ ಮನೆಯನ್ನು
ಕಟ್ಟಿಕೊಂಡನು.

ಆ ಮರದಲ್ಲಿ ಕಟ್ಟಿದ ಒಂದು
ಕೋಣೆಯು ಜ೭ ಅಡಿ ಉದ್ದವಿತ್ತು,
ಒಂದು ಕಡೆ ಅದು ಲ ಅಡಿ ಎತ್ತರವಿತ್ತು
ಮತ್ತೊಂದು ಕಡೆ ಳ ಅಡಿ ಎತ್ತರ.



ಮರ ಕಡಿಯುವವರು ಈಗ ಈ ಮರಗಳನ್ನು ಕತೀರಿಸುವುದಿಲ್ಲ. ಇವುಗಳನ್ನು ಸಂರಕ್ಷಿತ ಪ್ರಭೇದ ಎಂದು ಘೋಷಿಸಲಾಗಿದೆ.

ಪ್ರತಿ ವರ್ಷ ಸಾವಿರಾರು ಜನರು ಇವುಗಳನ್ನು ನೋಡಲು ಇಲ್ಲಿಗೆ ಬರುತ್ತಾರೆ.

ಗ್ರಾಂಟ್ ತೋಪಿನಲ್ಲಿ ಬೆಳಸಿರುವ ಜನರಲ್ ಗ್ರಾಂಟ್ ಸೆಕೋಯಾ ಮರ ಅಮೆರಿಕ ರಾಷ್ಟ್ರದ ಕ್ರಿಸ್ಮಸ್ ಮರ. ಅನೇಕ ಪ್ರವಾಸಿಗಳು ಈ ಮರದ ಕೊಂಬೆಗಳ ನೆರಳಿನಲ್ಲಿ, ಕೆಳಗಡೆ ಕ್ರಿಸ್ಮಸ್ ಅನ್ನು ಕೊಂಡಾಡುತ್ತಾರೆ.

ವಿಶಾಲ, ದೊಡ್ಡ ಸೆಕೋಯಾ ಮರ ಒಂದು ವಿಶೇಷ ಮರ.

ಅದು ತುಂಬಾ ಎತ್ತರವಿದೆ.

ಅದು ಬಹಳ ಸುಂದರವಿದೆ.

ಅದು ಪ್ರಪಂಚದಲಿನ್ನ ಅತೀ ದೊಡ್ಡ ಜೀವಂತ ವಸ್ತು.

